ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮಂಜೂರಾದ ಹಾಸ್ಟೆಲ್‌ಗಳ ಬಗ್ಗೆ.

೬೮೮. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರಮಿಟಕಲ್).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೪-೮೫ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ರಾಜ್ಯದಲ್ಲಿ ಒಟ್ಟು ಹೊಸ ವಿದ್ಯಾರ್ಥಿನಿಲಯಗಳ ಮಂಜೂರಾತಿ ಎಷ್ಟು ? ಮತ್ತು ನಿರ್ದಿಷ್ಟವಾಗಿ ಗುಲ್ಬರ್ಗಾ ಜಿಲ್ಲೆಯವರಿಗೆ ಪ್ರಾರಂಭವಾದ ಹೊಸ ವಿದ್ಯಾರ್ಥಿನಿಲಯಗಳು ಎಷ್ಟು ?

ಆ) ಗುಲ್ಬರ್ಗಾ ಜಿಲ್ಲೆ ಯಾದಗಿರಿ ತಾಲ್ಲೂಕಿನ ಗಜಾರ್ ಜೋಟ್ ಗ್ರಾಮಕ್ಕೆ ಪರಿಶಿಷ್ಟ ಜಾತಿಯವರಿಗಾಗಿ ಮಂಜೂರಾದ ಹೊಸ ಸರ್ಕಾರಿ ವಿದ್ಯಾರ್ಥಿನಿಲಯ ಇತರ ಸ್ಥಳಕ್ಕೆ ವರ್ಗಾಯಿಸಿರುವುದು ನಿಜಾಂಶವೇ ?

ಇ) ಹಾಗಿದ್ದಲ್ಲಿ ಅದಕ್ಕೆ ಕಾರಣವೇನು ?

ಈ) ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಂದಲ್ಲಿ ಹಾಲಿ ಇರುವ ಸಂಖ್ಯೆಯನ್ನು ಹೆಚ್ಚಿಸಲು ಗಾಜರ್ ಕೋಟೆಯ ಗ್ರಾಮಪಂಸ್ಥರಿಂದ ಈ ಬಗ್ಗೆ ಏನಾದರೂ ಮನವಿಸಲ್ಲಿಸಲಾಗಿದೆಯೇ?

ಉ) ಹಾಗಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ೧೯೮೪-೮೫ನೇ ಸಾಲಿನಲ್ಲಿ ಎರಡು ಪದವಿಪೂರ್ವ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಯಿತು. ಗುಲ್ಬರ್ಗಾ ಜಿಲ್ಲೆಗೆ ಮಂಜೂರು ಮಾಡಿಲ್ಲ.

ಆ) ಹೌದು, ಅದನ್ನು ಕಂಡ್ಯೂರಿಗೆ ವರ್ಗ ಮಾಡಲಾಯಿತು.

ಇ) ಗಾಜರ್ ಕೋಟೆಯಲ್ಲಿ ಸಾಕಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳು ಲಭ್ಯವಿಲ್ಲದ ಕಾರಣ ಮತ್ತು ಕಂಡ್ಯೂರಿಗೆ ಅತ್ಯವಶ್ಯಕವಾಗಿ ವಿದ್ಯಾರ್ಥಿನಿಲಯ ತೆರೆಯಬೇಕಾಗಿ ಬಂದುದರಿಂದ ಈ ಮಂಜೂರಾಗಿದ್ದ ನಿಲಯವನ್ನು ವರ್ಗಾವಣೆ ಮಾಡಬೇಕಾಯಿತು.

ಈ) ಬಂದಿಲ್ಲ.

ಉ) ಉದ್ಭವಿಸುವುದಿಲ್ಲ.

೧೯೮೫-೮೬ರ ಬಜೆಟ್ಟಿನಲ್ಲಿ ಚಿತ್ತಾಪುರ ತಾಲ್ಲೂಕಿನ ಲಾಡಲಾಪುರದ ಕೆರೆ ಸೇರಿಸುವ ಬಗ್ಗೆ.

೧೩೦೮. ಶ್ರೀ ಕೆ. ಬಿ. ಶಾನಪ್ಪ (ಆಳಂದ).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫-೮೬ರ ಬಜೆಟ್ಟಿನಲ್ಲಿ ಚಿತ್ತಾಪುರ ತಾಲ್ಲೂಕಿನ ಲಾಡಲಾಪುರದ ಬನಪ್ಪ ಕೆರೆ ಮತ್ತು ಬನಟ್ಟಿ ಕೆರೆಗಳನ್ನು ಸೇರಿಸಲಾಗಿರುವುದು ನಿಜವೇ ?

ಆ) ಈ ಎರಡು ಕೆರೆಗಳ ಒಟ್ಟು ಅಂದಾಜು ವೆಚ್ಚವೆಷ್ಟು ? ಈ ವರ್ಷ ಎಷ್ಟು ಹಣ ನಿಗದಿ ಪಡಿಸಲಾಗಿದೆ ?

ಇ) ಈ ಕೆಲಸಗಳನ್ನು ಪ್ರಸಕ್ತ ಸಾಲಿನಲ್ಲಿ ತೆಗೆದುಕೊಳ್ಳಲಾಗುವುದೆ ? ಹಾಗಿಲ್ಲದಲ್ಲಿ ಯಾವಾಗ ಪೂರ್ಣಗೊಳಿಸಲು ಯೋಜಿಸಲಾಗಿದೆ ?

ಈ) ಈ ಕೆರೆಗಳಿಂದ ಎಷ್ಟು ಎಕರೆ ನೀರಾವರಿಯಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

		೧೯೮೬-೮೭ರ ಅನುದಾನ
ಆ)	ಬನಪ್ಪ ಕೆರೆ } ವಿವರಣಾತ್ಮಕ ಅಂದಾಜುಗಳನ್ನು } ಬನಹಟ್ಟಿ ಕೆರೆ } ತಯಾರು ಮಾಡಲಾಗುತ್ತಿದೆ.	೯೦,೦೦೦ ರೂಪಾಯಿಗಳು ೧,೪೦,೦೦೦ ರೂಪಾಯಿಗಳು

ಇ) ಇಲ್ಲ. ಉದ್ಭವಿಸುವುದಿಲ್ಲ.

ಈ)	ಬನಪ್ಪ ಕೆರೆ	...	೧೪೯ ಹೆಕ್ಟೇರುಗಳು
	ಬನಹಟ್ಟಿ ಕೆರೆ	...	೧೯೨ ಹೆಕ್ಟೇರುಗಳು.

ಸಭೆಯಲ್ಲಿ ಮಂಡಿಸಲಾಗುವ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೆ, ಕಂದಾಯ ಮಂತ್ರಿಗಳ ಪರವಾಗಿ ಹಾಗೂ ಸಾರಿಗೆ ಸಚಿವರ ಹೆಸರಿನ ಮುಂದಿರತಕ್ಕ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1. Notification No.RB/REV/CR 134/85-86 dated 10th February. 1986.

Remission of land Revenue in respect of 34 villages of Hubli Taluk for the year 1985-86.

2. Notification No. RB/REV/CR 135/85-86 dated 10th Febuary, 1986.

Remission of land Revenue in respect of 10 villages of Gadag Taluk for the year 1985-86.

3. Notification No. RB/REV/CR-142/85-86 dated 10th Februry 1986.

Remission of land Revenue in respect of 34 villages of Kalghari Taluk for the year 1985-86.

4. Notification No. RB/REV/CR-144/85-86 dated 10th Februaary, 1986.

Remission of land Revenue in respect of 35 villages of Mundargi Taluk for the year 1985-86.

5. Notification No. RB/REV/CR—145/85-86 dated 10 th February, 1986.

Remission of land Revenue in respect of 28 villages of Ron Taulk.

6. Notification No. RB/REV/CR—145/85-86 dated 10 th February. 1986.

Remission of land Revenue in respect of 58 villages of Shiggaon Taulk for the year 1985-86.